ಶ್ರೀಮತಿ ಬಸವರಾಜೇಶ್ವರಿ :—ಮಾನ್ಯ ಸದಸ್ಯರು ಹೇಳಿರತಕ್ಕ ಅಭಿಪ್ರಾಯವನ್ನು ಗಮನದಲ್ಲಿಟ್ಟು-ಕೊಂಡು ಏನು ಕೆಲಸವಾಗಿದೆ, ಎಷ್ಟು ಡಿಫೆಕ್ಟಿವ್ ಆಗಿದೆ, ಯಾರು ಜವಾಬ್ದಾರಿ ಎಂಬುದನ್ನು ಪರಿಶೀಲನೆ ಮಾಡುತ್ತೇನೆ.

SRI DIGAMBARARAO B. KALMANKAR :—Who is the Contractor for this work and is there any charge against him?

ಶ್ರೀಮತಿ ಬಸವರಾಜೇಶ್ವರಿ :—ಆ ಕಂಟ್ರಾಕ್ಟರ್ ಹೆಸರು ನನಗೆ ಗೊತ್ತಿಲ್ಲ.

MISMANAGEMENT IN CO-OPERATIVE SOCIETIES AT SHIMOGA

421. SRI ABDUL KHUDUS ANWAR (Bhadravathi).—

Will the Minister for Development be pleased to state :—

(*a*) the number of Co-operative Societies that have become defunct, due to mismanagement and misuse of funds in Shimoga District (Talukwise figures may be furnished);

(*b*) the number of Co-operative Societies, where Administrators are appointed, due to mismanagement;

(*c*) the action taken against the Directors, who have mismanaged the Societies;

(*d*) whether the Government has issued a direction prohibiting these Directors from contesting election after the expiry of the term of the Administrator so as to enable the Co-operative Societies to run on smooth lines ?

SRI B. L. GOWDA (Deputy Minister for Co-operation).—

(*a*) 79.

Shimoga	...	18
Bhadravathi		11
Channagiri	...	27
Honnali	...	7
Thirthahalli	...	13
Shikaripur	...	1
Sorab	...	1
Sagar	...	1
	...	—
		79

(*b*) 13.

(*c*) Civil and Criminal action has been taken in one case in which personal responsibility of Directors was fixed. The matter is under consideration in other cases.

(*d*) No.

ಶ್ರೀ ಅಬ್ದುಲ್ ಖಿದ್ದುಸ್ ಅನ್ವಾರ್ :--ಸೊಸೈಟಿಗಳಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿರುವುದಕ್ಕೆ ಕಾರಣ, ಅಲ್ಲಿರುವ ಮಾನೇಜ್‌ಮೆಂಟ್ ಇನ್‌ಎಫಿಷಿಯೆಂಟ್ ಆಗಿರುವುದು ಅಲ್ಲವೇ ?

† ಶ್ರೀ ಬಿ. ಎಲ್. ಗೌಡ :—ಎಲ್ಲಿ ಕ್ರಿಮಿನಲ್ ಮಿಸ್‌ಎಪ್ರೋಪ್ರಿಯೇಷನ್ ಆಗಿದೆ, ಅಲ್ಲೆಲ್ಲಾ ಇನ್‌ಎಫಿಷಿಯೆಂಟ್ ಮಾನೇಜ್‌ಮೆಂಟ್ ಇತ್ತು ಎಂದು ಹೇಳುವುದಕ್ಕಾಗುವುದಿಲ್ಲ.

2-00 P. M.

ಶ್ರೀ ಅಬ್ದುಲ್ ಖಿದ್ದುಸ್ ಅನ್ವಾರ್ :—ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಎಂದು ಆಡಿಟ್ ಮಾಡಿದಾಗ ಗೊತ್ತಾಗಿದೆ. ಡೀಟೇಲ್ಡ್ ರಿಪೋರ್ಟು ಬಂದಿಲ್ಲ ಎಂದು ಹೇಳಿ ಪ್ರಾಸಿಕ್ಯೂಷನ್ ಮಾಡದೆ ಹಾಗೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಲ್. ಗೌಡ :— ಯಾವ ಯಾವ ಕೇಸಿನಲ್ಲಿ ಮಿಸ್‌ಅಪ್ರೋಪ್ರಿಯೇಷನ್ ಆಗಿರುವುದು ಗಮನಕ್ಕೆ ಬಂದಿದೆಯೋ ಅಲ್ಲೆಲ್ಲಾ ಕೇಸ್ ಫೈಲ್ ಮಾಡಿದ್ದೇವೆ. ಯಾವುದು ಹಾಕಿಲ್ಲ ಎಂದು ತಮ್ಮ ಗಮನಕ್ಕೆ ತಂದರೆ ಕೇಸ್ ಹಾಕಲಿಕ್ಕೆ ಆದೇಶ ಕೊಡುತ್ತೇನೆ.

ಶ್ರೀ ಹೆಚ್. ಸಿದ್ದವೀರಪ್ಪ :—೭೯ ಸೊಸೈಟಿಗಳ ವೈಕಿ ಒಂದರಲ್ಲಿ ಮಾತ್ರ ಹಣ ದುರುಪಯೋಗವಾಗಿದೆ ಎಂದು ಹೇಳಿದ್ದೀರಿ. ಅಂದರೆ ೭೮ ಸೊಸೈಟಿಗಳಲ್ಲಿ ಮಿಸ್‌ಮ್ಯಾನೇಜ್‌ಮೆಂಟ್ ಆಗಿ ಒಂದರಲ್ಲಿ ಮಾತ್ರ ಹಣ ದುರುಪಯೋಗವಾಗಿದೆ ಎಂದು ಗ್ರಹಿಸುವುದು ಸರಿಯೇ ?

ಶ್ರೀ ಬಿ. ಎಲ್. ಗೌಡ :—ತಾವು ಬಹಳ ಚೆನ್ನಾಗಿ ಗ್ರಹಿಸಿದ್ದೀರಿ.

ಶ್ರೀ ಅಬ್ದುಲ್ ಖಿದ್ದುಸ್ ಅನ್ವಾರ್ :—ಮಿಸ್‌ಅಪ್ರೋಪ್ರಿಯೇಷನ್ ಮಾಡಿರುವ ಡೈರೆಕ್ಟರ್ ಮುಂದೆ ಅಲ್ಲಿ ನಡೆಯುವ ಚುನಾವಣೆಯಲ್ಲಿ ಕಂಟೆಸ್ಟ್ ಮಾಡಕೂಡದೆಂದು ಡೈರೆಕ್ಟಿವ್ ಕೊಡುತ್ತೀರಾ ?

SRI B. L. GOWDA :—Unless it is proved in a court of law, we cannot give such direction.

ಶ್ರೀ ಅಬ್ದುಲ್ ಖಿದ್ದುಸ್ ಅನ್ವಾರ್ :—ಪ್ರೂವ್ ಆಗಿರುವ ಕಡೆ ಹಾಗೆ ಡೈರೆಕ್ಷನ್ ಕೊಡುತ್ತೀರಾ ?

SRI B L GOWDA :—He is not eligible to stand for election.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಮಿಸ್‌ಅಪ್ರೋಪ್ರಿಯೇಷನ್ ಆಗಿದೆ ಎಂದು ಬಂದಿರುವ ಆಡಿಟ್ ರಿಪೋರ್ಟ್‌ನ್ನು ಹಿಂದೆ ಬದಲಾವಣೆ ಮಾಡಿದ ಹಾಗೆ ಈಗಲೂ ಬದಲಾವಣೆ ಮಾಡುವ ಯೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ಬಿ. ಎಲ್. ಗೌಡ :—ಹಿಂದೆ ಯಾವುದೂ ಮಾಡಿಲ್ಲ. ಈಗಲೂ ಯಾವುದೂ ಮಾಡುವುದಿಲ್ಲ.

MR. SPEAKER :—Since electricity has failed I adjourn the House for Ten Minutes.

The house rose at Five Minutes past Two of the Clock and re-assembled at Twenty Minutes past Two of the Clock.

(MR. SPEAKER in the Chair)